SRI K. PRABHAKAR (Minister for Rural Development and Panchayat Raj) —

(a) The matter is under consideration.

(b)This question does not arise.

ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸ್ವಲ್ಪ ತಿದ್ದಪಡಿ ಇದೆ. ಅದೇನೆಂದರೆ ಮಾನ್ಯಸದಸ್ಯರಾದ ಶ್ರೀ ರಾಮಭಟ್ ರವರ ಮೊದಲನೆ ಪ್ರಶ್ನೆಗೆ ಈ ವಿಷಯವು ಪರಿಶೀಲನೆಯಲ್ಲಿದೆ.' ಎಂದು ಉತ್ತರದಲ್ಲಿ ಆಚ್ಚಾಗಿದೆ; ಇದಕ್ಕೆ ಸರ್ಕಾರದ ಆದೇಶದ ನಂ. ಆರ್.ಡಿ.ಸಿ ೧೩೮ ಟಿ.ಡಿಬಿ. ೭೮, ದಿನಾಂಕ ೩ನೇ ಫೆಬ್ರುವರಿ ೧೯೭೯ರ ಪ್ರಕಾರ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸಿಬ್ಬಂದಿಗೆ ಕಷ್ಟಪರಿಹಾರ ಭತ್ಯವನ್ನು ಮಂಜೂರು ಮಾಡಿ ಕೊಡಲಾಗಿದೆ.

ಶ್ರೀ ಕೆ. ರಾಮಭಟ್.—ಸ್ವಾಮಿ, ಅವರಿಗೆ ಕಷ್ಟಪರಿಹಾರಭತ್ಯವನ್ನು ಯಾವ ತಾರೀಖಿನಿಂದ ಕೊಟ್ಟಿದ್ದೀರಾ ಎಂಬುದನ್ನು ತಿಳಿಸುತ್ತೀರಾ ?

†ಶ್ರೀ ಕೆ. ಪ್ರಭಾಕರ್ —ಇತರ ಎಲ್ಲಾ ನೌಕರರಿಗೆ ಈ ಭತ್ಯವನ್ನು ಕೊಟ್ಟು ಆಗಿತ್ತು. ಇದನ್ನು ತಾಲ್ಲೂಕು ಡೆವೆಲಪ್‌ಮೆಂಟ್ ಬೋರ್ಡ್ ನೌಕರರಿಗೆ ಕೂಡ ಅನ್ವಯಿಸಿ ದಿನಾಂಕ ೩ನೇ ಫೆಬ್ರುವರಿ ೧೯೭೯ ರಿಂದ ಜಾರಿಗೆ ಕೊಡಲಾಗಿದೆ.

ಶ್ರೀ ಕೆ. ರಾಮಭಟ್.—ಇತ್ತೀಚೆಗೆ ಕಷ್ಟ ಪರಿಹಾರ ಭತ್ಯವನ್ನು ತಂಟ್ಪಿಭತ್ಯಕ್ಕೆ ಸೇರಿಸಲಾಗಿದೆ. ಇದನ್ನು ಮುನಿಸಿಪಾಲಿಟಿ ಸಿಬ್ಬಂದಿಗೂ ಅನ್ವಯಿಸುವಿರಾ ?

ಶ್ರೀ ಕೆ. ಪ್ರಭಾಕರ್.—ಈ ಪ್ರಶ್ನೆ ನನ್ನ ಖಾತೆಗೆ ಸಂಬಂಧಪಟ್ಟಿದ್ದಲ್ಲ.

ಅಧ್ಯಕ್ಷರು.—ಯಾರಿಗೆ ಸಂಬಂಧಪಟ್ಟಿದೆಯೋ ಅವರು ಉತ್ತರ ಕೊಡಲಿ.

ಶ್ರೀ ಬಿ.ವಿ. ಕಕ್ಕಿಲಾಯ.—ಫೆಬ್ರುವರಿ ತಿಂಗಳಲ್ಲಿ ಆಜ್ಞೆ ಹೊರಡಿಸಲಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಆದರೆ, ರಾಜ್ಯದಲ್ಲಿರುವ ಎಲ್ಲ ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ಸಿಬ್ಬಂದಿಗೆ ಕಷ್ಟಪರಿಹಾರ ಭತ್ಯವನ್ನು ಕೊಡುತ್ತಿರುವರೆ ? ಒಂದು ವೇಳೆ ಯಾವುದಾದರೂ ಮಂಡಳಿಯವರು ಇನ್ನೂ ಕೊಡದೆ ಇರುವುದನ್ನು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುವರೆ

ಶ್ರೀ ಕೆ. ಪ್ರಭಾಕರ್.—ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

Pending Petitions under Industrial Disputes Act

467 SRI B.V. KAKKILAYA (Vittal).—Will the Minister for Labour and Excise be pleased to state :—

(a) the number of petition under Section 33 (c) (1) of the Industrial Disputes Act, pending before the Government for disposal at the end of financial year 1975-76, 1976-77, and 1977-78 ;

(b) the number of recovery certificates issued in 1975-76, 1976-77 and 1977-78 and the total amounts to be realised as per the certificates ;

(c) the amounts actually recovered and the amounts paid to the concerned workmen in 1975-76, 1976-77 and 1977-78 and the total amount outstanding recovery and payment to workmen at the end of the financial year 1977-78 ;

(d) steps taken or proposed to be taken for expeditious recovery and payment to workmen ?

SRI R. S. PATIL.(Minister for Labour and Excise)—

(a)—

(i)	1975-76	2
(ii)	1976-77	6
(iii)	1977-78	5

(b)—

Year	Recovery certificates issued	Amount to be realised
(i) 1975-76	22	Rs. 1,40,261-55
(ii) 1976-77	24	Rs. 91,174-53
(iii) 1977-78	29	Rs. 1,09,983-53
	Total	Rs. 3,41,419-61

(c)—

Year	Amount recovered and paid to the workmen
(i) 1975-76	Rs. 8,390-42
(ii) 1976-77	Rs. 24,631-90
(iii) 1977-78	Rs. 33,728-87
Total	Rs. 66,751-19

(iv) Total amount outstanding recovery at the end of financial year 1977-78 is Rs. 2,74,668-42.

(d) The Deputy Commissioners concerned have been asked to effect the recoveries expeditiously.

ಶ್ರೀ ಬಿ. ವಿ. ಕಕ್ಕಿಲಾಯ.—ಸಂಬಂಧಪಟ್ಟ ಕಾರ್ಮಿಕರು ವೈಯಕ್ತಿಕವಾಗಿ ಅರ್ಜಿಗಳನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಬಂದಿದ್ದರೆ, ಅವುಗಳನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ತೀರ್ಮಾನ ಕೊಡಲಾಗುವುದೆ ?

† ಶ್ರೀ ಆರ್. ಎಸ್. ಪಾಟೀಲ್.—ಈ ಪ್ರಕರಣಗಳು ಸರ್ಕಾರದಲ್ಲಿ ತುಂಬಾ ದಿವಸಗಳಿಂದ ಪರಿಶೀಲನೆಯಲ್ಲಿವೆ. ಬಹುಶಃ: ಇವು ಇತ್ಯರ್ಥವಾಗದೆ ಬಹಳ ದಿವಸಗಳಿಂದ ಉಳಿದಿರಬಹುದೆಂದು ಇದರಿಂದ ಕಂಡುಬರುತ್ತದೆ ಇದು ಅಸಂಖ್ಯಾತ ಕಾರ್ಮಿಕರಿಗೆ ಸಂಬಂಧಪಟ್ಟಿರುವುದಾಗಿದೆ. ಯಾವ ಕಾರಣಕ್ಕಾಗಿ ಇವು ಉಳಿದಿವೆ ಎಂದು ಪರಿಶೀಲಿಸಿ ಆದಷ್ಟು ಜಾಗ್ರತೆ ನಿರ್ಣಯ ತೆಗೆದುಕೊಳ್ಳುವ ಹಾಗೆ ಮಾಡಲಾಗುವುದು.

ಶ್ರೀ ಬಿ. ಎ. ಕಕ್ಕಿಲಾಯ.—ಸರ್ಕಾರದ ತೀರ್ಮಾನವಾಗಿ ಸರ್ಟಿಫಿಕೇಟ್ ಸಿಕ್ಕಮೇಲೂ ಸಹ ಅದು ವಸೂಲಾಗುವ ಕ್ರಮವೆಂದರೆ: ಜಿಲ್ಲಾಧಿಕಾರಿಗಳು ಅದನ್ನು ತಹಶೀಲ್ದಾರರಿಗೆ ಕಳುಹಿಸುತ್ತಾರೆ, ತಹಶೀಲ್ದಾರರು ಅದನ್ನು ರೆವಿನ್ಯೂ ಇನ್‌ಸ್ಪೆಕ್ಟರಿಗೆ ಕಳುಹಿಸುತ್ತಾರೆ. ಹೀಗೆ ವರ್ಷಾನುಗಟ್ಟಲೆಯಾದರೂ ವಸೂಲ್ಮಾಡಲು ಕ್ರಮ ತೆಗೆದುಕೊಳ್ಳದೆ, ತಹಶೀಲ್ದಾರ್‌ಮತ್ತು ರೆವಿನ್ಯೂ ಇನ್‌ಸ್ಪೆಕ್ಟರ್‌ರವರ ಕಛೇರಿಯಲ್ಲಿ ಅರ್ಜಿಗಳು ಕೊಳೆಯುತ್ತಿವೆಯೇ ಹೊರತು ಕಾರ್ಮಿಕರಿಗೆ ನಿಜವಾಗಿಯೂ ಹಣ ಬಂದಿಲ್ಲವೆನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ, ಅದನ್ನು ಪರಿಶೀಲನೆ ಮಾಡಿ, ಅವರಿಗೆ ಶೀಘ್ರವಾಗಿ ಹಣ ತಲುಪುವುದಕ್ಕೆ ತೀವ್ರ ಕ್ರಮ ಕೈಗೊಳ್ಳುವರೆ?

ಶ್ರೀ ಆರ್. ಎಸ್. ಪಾಟೀಲ್.—ಈಗ ವಸೂಲಾಗಿರುವ ರಕಂ ೩,೪೧,೦೦೦ ರೂಪಾಯಿಗಳು, ಇನ್ನೂ ಬಾಕಿ ಉಳಿದಿರುವುದು ೨.೭೪,೦೦೦ ರೂಪಾಯಿಗಳು. ಇದನ್ನು ನೋಡಿದರೆ ವಸೂಲಿ ಕ್ರಮ ಆಷ್ಟೊಂದು ಸಮಾಧಾನಕರವಾಗಿಲ್ಲವೆಂದು ನಾನು ಒಪ್ಪುತ್ತೇನೆ. ವಸೂಲು ಮಾಡಬೇಕಾದರಲ್ಲಿ ಭೂಕಂದಾಯದ ಬಾಕಿಯಂತೆ ವಸೂಲ್ಮಾಡಬೇಕು. ಈ ಕ್ರಮವನ್ನು ಅನುಸರಿಸುತ್ತಿರುವುದೂ ಉಂಟು. ಆದುದರಿಂದ, ಜಿಲ್ಲಾಧಿಕಾರಿಯವರಿಗೆ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಂಡು ವಸೂಲ್ಮಾಡಬೇಕೆಂದು ತಿಳಿಸಲಾಗಿದೆ. ಶ್ರೀಮತ್ ನ್ಯಾಯಾಲಯದಿಂದ ಸ್ಟೇ ಆರ್ಡರ್ ಬಂದಮೇಲೆ ಸುಮಾರು ೩೦ ಸಾವಿರ ರೂಪಾಯಿಗಳಷ್ಟು ಹಣ ವಸೂಲಾಗಿಲ್ಲ, ಸುಮಾರು ನಾಲ್ಕು ಸಾವಿರ ರೂಪಾಯಿ ಹಣಕ್ಕೆ ಲಿಕ್ವಿಡೆ ಟರನ್ನು ನೇಮಕ ಮಾಡಿ, ವಸೂಲಿ ಕ್ರಮ ಮಾಡಲಾಗುತ್ತಿದೆ. ಇದನ್ನು ಹೊರತುಪಡಿಸಿ, ಬಾಕಿ ಇರುವ ಹಣವನ್ನು ವಸೂಲ್ಮಾಡವುದಕ್ಕೆ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ. ಎ. ಕಕ್ಕಿಲಾಯ.—ಈ ಹಣವನ್ನು ಭೂಕಂದಾಯ ಬಾಕಿ ವಸೂಲಿ ರೀತಿ ವಸೂಲಿ ಮಾಡುತ್ತಾ ಹೋದರೆ, ಬಹಳ ವಿಳಂಬವಾಗುತ್ತದೆ. ಆದುದರಿಂದ, ಕಾರ್ಮಿಕ ಇಲಾಖೆ ವಸೂಲ್ಮಾಡಲು, ವಿಶೇಷ ಸಿಬ್ಬಂದಿಯನ್ನು ನೇಮಕ ಮಾಡಿ, ಆ ಹಣವನ್ನು ಕಾರ್ಮಿಕರಿಗೆ ಆದಷ್ಟು ಜಾಗ್ರತೆ ತಲುಪಿಸುವ ಕ್ರಮವನ್ನು ಪರಿಶೀಲಿಸುವಿರಾ?

ಶ್ರೀ ಆರ್. ಎಸ್. ಪಾಟೀಲ್.—ಪರಿಶೀಲಿಸಬಹುದು.

Co-operative Sugar Factory at Brahmavar

664 SRI B. A. MOHIDEEN (Bhantawal)—Will the Minister for Co-operation be pleased to state:—

(a) whether it is a fact that the proposed Co-operative sugar Factory at Brahmvar is being shelved by the Government;

(b) if not, what is the reason for inordinate delay in commissioning the sugar Factory?

SRI V. M. KUSHNUR.(Minister for Co-operation).—

(a) No.

(b) Difficulties like arranging adequa e resources.

ಅಧ್ಯಕ್ಷರು:—ಪ್ರಶ್ನೆ ನಂ. ೪೧೩ ತಡೆಹಿಡಿಯಲಾಗಿದೆ.

SRI B. A. MOHIDEEN.—Sir, here the hon. Minister has stated that because of difficulties like arranging adequate resources, the sugar factory could not be taken up. I would like to know from the Hon. Minister when this society was registered and how much is the share-capital from the Government side.